**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 42/2024**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ03**

**ದಿನಾಂಕಃ 12.11.2025** **ಸಿಡಬ್ಲ್ಯೂ01**

| | |
|---|---|
| ಹೆಸರು | ವಜೀರ್ ಸಾಬ್ |
| ತಂದೆ ಹೆಸರು | ಜಟ್ಟಿಸಾಬ್ |
| ವಯಸ್ಸು | 39 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸ ಸ್ಥಳ | ಗೋಳಿಹಾಳ ಗ್ರಾಮ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ.2 ಮತ್ತು 3 ರವರ ಪರಿಚಯವಿದೆ. ಸದರಿಯವರು ಬಸ್ ನಲ್ಲಿ ಇದ್ದರು. ಚಾಸಾ.4 ರಿಂದ 19 ರವರು ಸಹ ಬಸ್ ನಲ್ಲಿ ಇದ್ದರು. ಆರೋಪಿ ಪರಿಚಯವಿದೆ. ಆರೋಪಿ ನಾನು ಪ್ರಯಾಣಿಸುತ್ತಿದ್ದ ಬಸ್ ನಲ್ಲಿ ಚಾಲಕನಾಗಿದ್ದರು. ಸನ್ 2023 ರಲ್ಲಿ ನಾನು ಶಿವಮೊಗ್ಗದಿಂದ ಹರಿಹರಕ್ಕೆ ಕೆ ಎಸ್ ಆರ್ ಟಿ ಸಿ ಬಸನಲ್ಲಿ ಬರುತ್ತಿದ್ದೆನು. ಸಂಜೆ 6.00 ಗಂಟೆ ಸುಮಾರು ಬೈಪಾಸ್ ರಸ್ತೆ ಶಿವನಹಳ್ಳಿ ಹತ್ತಿರ ನಮ್ಮ ಬಸ್ ಒಂದು ಲಾರಿಗೆ ಡಿಕ್ಕಿ ಹೊಡೆಯಿತು. ನಮ್ಮ ಬಸ್ ಅತಿವೇಗದಿಂದ ಹೊರಟಿದ್ದರಿಂದ ಅಪಘಾತ ಸಂಬವಿಸಿತು. ನನಗೆ ಎಡಕಣ್ಣಿನ ಹತ್ತಿರ ಪೆಟ್ಟಾಯಿತು. ಬಸ್ ನಲ್ಲಿರುವ ಸುಮಾರು 20 ಜನ ಪ್ರಯಾಣಿಕರಿಗೆ ಪೆಟ್ಟಾಗಿತ್ತು. ಸುಮಾರು 15-20 ಜನರನ್ನು ಆಂಬುಲೆನ್ಸ ನಲ್ಲಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅದೇ ದಿನ ರಾತ್ರಿ ಸುಮಾರು 8-9.00 ಗಂಟೆಗೆ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ಸದರಿ ಬಸ್ ನಂಬರ್ ನನಗೆ ನೆನಪಿಲ್ಲ. ಸಾಕ್ಷಿಯು ಗುರುತಿಸಿದ ದೂರನ್ನು ನಿಪಿ.4 ಎಂದು ಸಾಕ್ಷಿಯ ಸಹಿಯನ್ನು ನಿಪಿ.4 (ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು ಅದು ಪಂಚನಾಮೆ ಆಗಿದ್ದು ಅದನ್ನು ಈಗಾಗಲೇ ನಿಪಿ.1 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.1 (ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು ಅದು ಕಚ್ಚಾ ನಕಾಶೆ ಆಗಿದ್ದು ಅದನ್ನು ಈಗಾಗಲೇ ನಿಪಿ.2 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.2 (ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಘಟನಾ ಸ್ಥಳದಲ್ಲಿ ಮಾಡಿರುತ್ತೇನೆ. ಸ್ಥಳದಲ್ಲಿ ಫೊಟೋ ತೆಗೆದಿರುತ್ತಾರೆ. ಸಾಕ್ಷಿಯು ಗುರುತಿಸಿದ ಛಾಯ ಚಿತ್ರಗಳನ್ನು ಈಗಾಗಲೇ ನಿಪಿ.4 ರಿಂದ 7 ಎಂದು ಗುರುತಿಸಲಾಗಿದೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿಯನ್ನು

ಗುರುತಿಸಿದ್ದು ಅದು ವಾಹನ ಪಂಚನಾಮೆ ಆಗಿದ್ದು ಅದನ್ನು ಈಗಾಗಲೇ ನಿಪಿ.3 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.3 (ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದೂರು ನೀಡಿದ ಠಾಣೆಯಲ್ಲಿ ಮಾಡಿರುತ್ತೇನೆ. ಸದರಿ ದಾಖಲೆಗೆ ದೂರು ನೀಡಿದ ಕಾರಣಕ್ಕೆ ಸಹಿ ಮಾಡಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಮಾನ್ಯ ಎಪಿಪಿ ಯವರು ಕೋರಿದ್ದು, ಸಂಗತಿಗಳನ್ನು ಪರಿಶೀಲಿಸಲಾಗಿ ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲುಃ ಸಸಅ ರವರಿಂದಃ**

ದಿಃ 03.07.2023 ರಂದು ಕೆಎ 9/ಎಫ್ 5465 ನೇ ಕೆ ಎಸ್ ಆರ್ ಟಿ ಸಿ ಬಸನಲ್ಲಿ ಬರುತ್ತಿದ್ದೆ ಎಂದರೆ ಸರಿ. ಸದರಿ ಸಂದರ್ಭದಲ್ಲಿ ಚಾಸಾ.5 ರಿಂದ 19 ರವರು ನನ್ನೊಂದಿಗೆ ಪ್ರಯಾಣಿಸುತ್ತಿದ್ದರು ಎಂದರೆ ಸರಿ. ಬಸ್ ಚಾಲಕನ ಹೆಸರು ಬಸನಗೌಡ ಎಂದು ತಿಳಿದಿರುತ್ತದೆ ಎಂದರೆ ಸರಿ. ದಿಃ 04.07.2023 ರಂದು ಅಪಘಾತಕ್ಕೊಳಗಾದ ವಾಹನಗಳನ್ನು ನನ್ನ ಸಮಕ್ಷಮ ಮದ್ಯಾಹ್ನ 12.30 ರಿಂದ 1.30 ವರೆಗೆ ಪಂಚನಾಮೆ ಮಾಡಿ ಜಪ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿ ಎಸ್ ಪಿ ವಕೀಲರಿಂದಃ**

ಅಪಘಾತ ದಿನಾಂಕ 03.07.2023 ರಂದು ಆಗಿರುತ್ತದೆ. ನಾನು ಪ್ರಯಾಣಿಸುತ್ತಿದ್ದ ಬಸ್ ನ ನಂಬರನ್ನು ನಿಖರವಾಗಿ ಹೇಳಲು ಬರುವುದಿಲ್ಲ. ಅದೇ ರೀತಿ ಲಾರಿಯ ಸಂಖ್ಯೆ ಹೇಳಲು ಬರುವುದಿಲ್ಲ. ಅದೇ ರೀತಿ ಲಾರಿಯ ಚಾಲಕನ ಹೆಸರು ಹಾಗೂ ತಂದೆಯ ಹೆಸರು ನನಗೆ ಹೇಳಲು ಬರುವುದಿಲ್ಲ. ಅಪಘಾತವಾದ ರಸ್ತೆ ರಾಜ್ಯ ಹೆದ್ದಾರಿ ಎಂದರೆ ಸರಿ. ಸದರಿ ಸ್ಥಳದಲ್ಲಿ ಸಾಕಷ್ಟು ವಾಹನ ಸಂಚಾರ ಇರುತ್ತದೆ ಎಂದರೆ ಸರಿ. ಅಪಘಾತವಾದ ಸ್ಥಳದಲ್ಲಿ 2 ಕ್ರಾಸ್ ಗಳು ಇದ್ದು ಅವು ಶಿವನಹಳ್ಳಿ ಕ್ರಾಸ್ ಮತ್ತು ಬೆಳ್ಳೂಡಿ ಕ್ರಾಸ್ ಎಂದು ಇದ್ದು ಯಾವ ಕ್ರಾಸ್ ಬಳಿ ಅಪಘಾತ ಸಂಬವಿಸಿರುತ್ತದೆ ಎಂದು ನಿಖರವಾಗಿ ದೂರಿನಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ಯಾವ ಶಿವನಹಳ್ಳಿ ಕ್ರಾಸ್ ಎಂದು ಬರೆಸದಿದ್ದರೂ ಸಹ ಬರೆಸಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬಸ್ ನ ಹಿಂದಿನ ಭಾಗದ ಸೀಟಿನಲ್ಲಿ ಕುಳಿತಿದ್ದೆ. ಅಂದರೆ ಕಂಡಕ್ಟರ್ ಕುಳಿತುಕೊಳ್ಳುವ ಹಿಂಬಾಗದ ಸೀಟಿನಲ್ಲಿ ಕುಳಿತಿದ್ದೆ. ಸಾಮಾನ್ಯವಾಗಿ ಬಸ್ ನ ಹಿಂದಿನ ಸೀಟಿನಲ್ಲಿ ಕುಳಿತವರಿಗೆ ಬಸ್ ನ ಮುಂಬಾಗದಲ್ಲಿ ಏನಾಗುತ್ತದೆ ಎಂದು ಕಾಣುವುದಿಲ್ಲ ಎಂದರೆ ಸರಿ. ಬಸ್ ನಲ್ಲಿ 50-60 ಜನ ಇದ್ದರು. ಬಸ್ ತುಂಬಿತ್ತು ಎಂದರೆ ಸರಿ. ಸಾಮಾನ್ಯವಾಗಿ ತುಂಬಿದ ಬಸ್ ವೇಗವಾಗಿ ಚಲಿಸಲು ಸಾಧ್ಯ ಇಲ್ಲ ಎಂದರೆ ಸರಿಯಲ್ಲ. ಲಾರಿ ಖಾಲಿ ಇತ್ತು ಎಂದರೆ ಸರಿ. ಅಪಘಾತವಾದ ದಿನ ತುಂತುರು ಮಳೆ ಬರುತ್ತಿತ್ತು ಎಂದರೆ ಸರಿ. ಸಂಜೆ 6.00 ಗಂಟೆ ಸಮಯ ಮಬ್ಬು ಗತ್ತಲೆ ಸಮಯ ಎಂದರೆ ಸರಿ. ಮಬ್ಬು ಕತ್ತಲೆಯಲ್ಲಿ ಮುಂದೆ ಬರುವ ವಾಹನದ ಹೆಡ್ ಲೈಟ್ ಹಾಕದೇ

ಇದ್ದರೆ ವಾಹನಗಳು ಬರುವುದು ಗೊತ್ತಾಗುವುದಿಲ್ಲ ಎಂದರೆ ಸಾಕ್ಷಿಯು ಲಾರಿಯ ಚಾಲಕ ಹೆಡ್ ಲೈಟ್ ಹಾಕಿರಲಿಲ್ಲ ಎಂದು ನುಡಿಯುತ್ತಾರೆ. 1 ನೇ ಆರೋಪಿ ಬಸ್ ತುಂಬಿದ್ದರಿಂದ ನಿಧಾನವಾಗಿ ಚಲಾಯಿಸುತ್ತಿದ್ದ ಎಂದರೆ ಸರಿಯಲ್ಲ. ಲಾರಿ ಚಾಲಕ ಹೆಡ್ ಲೈಟನ್ನು ಹಾಕಿಕೊಳ್ಳದೇ ತಾನೇ ವೇಗವಾಗಿ ಬಂದು ಬಸ್ ಗೆ ಡಿಕ್ಕಿಪಡಿಸಿದ ಪರಿಣಾಮ ಅಪಘಾತ ಸಂಬವಿಸಿರುತ್ತದೆ ಎಂದರೆ ಸರಿಯಲ್ಲ. ಆರೋಪಿ ತಪ್ಪಿನಿಂದ ಅಪಘಾತ ಸಂಬವಿಸದಿದ್ದರೂ ಸಹ ಪರಿಹಾರ ಧನ ಪಡೆಯುವ ಸಲುವಾಗಿ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ಸಂಜೆ 6.00 ಗಂಟೆಗೆ ಜರುಗಿಸಿರುತ್ತಾರೆ. ನಿಪಿ.4 ಮತ್ತು 5 ರಲ್ಲಿ ಸ್ಪಷ್ಟವಾಗಿ ಬೆಳಕು ಇದೆ ಎಂದರೆ ಸರಿ. ನಾನು ಹೇಳಿದ ಸಮಯಕ್ಕೆ ನಿಪಿ.2 ಮತ್ತು 5 ನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಸಾಕಷ್ಟು ಜನ ಸಂಚಾರ ಇದೆ ಎಂದರೆ ಸರಿ. ಚಾಸಾ.2 ಮತ್ತು 3 ರವರು ಎಲ್ಲಿಯವರು ಎಂದು ನನಗೆ ಗೊತ್ತಿಲ್ಲ. ನಿಪಿ1 ಮತ್ತು 3 ರಲ್ಲಿ ಬರೆದಿರುವ ಸಂಗತಿಗಳನ್ನು ನಿಖರವಾಗಿ ನನಗೆ ಹೇಳಲು ಬರುವುದಿಲ್ಲ. ನಾನು ಯಾವುದೇ ಸ್ಥಳಕ್ಕೆ ಹೋಗಿಲ್ಲ, ಪ್ರಕರಣಕ್ಕೋಸ್ಕರ ಎಲ್ಲಾ ದಾಖಲೆಗಳನ್ನು ಠಾಣೆಯಲ್ಲಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ